Tumbe International e-Magazine
ISSN : 2581-7728
A Multilanguage Magazine
Issue-1
Volume-5
Jan-June: 2022

# ಆದಿಚುಂಚನಗಿರಿ ಮಠ

**ತೇಜುಶ್ರೀ ಕೆ**
U11GT21SO351
ಬಿಎಸ್ಸಿ ಮೊದಲನೇ ವರ್ಷ, ದ್ವಿತೀಯ ಸೆಮಿಸ್ಟರ್
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು -572104
deepika7676792371@gmail.com Ph.no: 7676792371

## ಪರಿಚಯ

ಈ ಕ್ಷೇತ್ರವು ಶಿವನ ತಪೋಭೂಮಿಯಾಗಿದ್ದು, ಸಿದ್ದಿಯೋಗಿಯ ಅವತಾರವನ್ನು ತಾಳಿದ ಪರಶಿವನು ಇಲ್ಲಿ ತಪೋಮಗ್ನನಾಗಿದ್ದರು. ತ್ರೇತಾಯುಗದಲ್ಲಿ ರಾಮಲಕ್ಷ್ಮಣರು ಈ ಪ್ರದೇಶದಲ್ಲಿ ತಪಸ್ಸು ಮಾಡಿರುವುದನ್ನು ನಾವು ಕಾಣಬಹುದು. ಆದಿಗಳಲ್ಲಿ ಆದಿ, ಆದಿಚುಂಚನಗಿರಿ ಕರ್ನಾಟಕದ ಸುಪ್ರಸಿದ್ದ ದೇವಸ್ಥಾನ ಅದರ ಹಾಗೂ ಪುಣ್ಯಕ್ಷೇತ್ರ. ಈ ಕ್ಷೇತ್ರವು ಕರ್ನಾಟಕದಲ್ಲಿರುವ ವಕ್ಕಲಿಗ ಸಮುದಾಯದ ಆಧ್ಯಾತ್ಮಿಕ ಕೇಂದ್ರವಾಗಿ ಇವತ್ತು ಪ್ರವಾಸಿಗರ ಗಮನ ಸೆಳೆಯುತ್ತಿದೆ. ಶ್ರೀ ಆದಿಚುಂಚನಗಿರಿಯು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿದೆ. ಉತ್ತರ ದಕ್ಷಿಣವಾಗಿ ಹಬ್ಬಿರುವ ಕಲ್ಲು-ಬಂಡೆಗಳಿಂದ ಕೂಡಿದ ಈ ಗಿರಿಯು ಸಮುದ್ರ ಮಟ್ಟಕ್ಕಿಂತ 3221 ಅಡಿ ಎತ್ತರದಲ್ಲಿದೆ.



ಹಸಿರು ಕಾನನಗಳಿಂದ ಕೂಡಿ ರಮಣೀಯವು ಪ್ರಶಾಂತವು ಆದ ಈ ಕ್ಷೇತ್ರವು ಪರಶಿವನ ತಪೋಭೂಮಿಯಾಗಿತ್ತೆಂದು ಜಾನಪದ ಸಾಹಿತ್ಯದಿಂದ ತಿಳಿದುಬರುತ್ತದೆ. ಆದಿಚುಂಚನಗಿರಿಯು ಬೆಂಗಳೂರಿನಿಂದ ಸುಮಾರು 110 ಕಿ.ಮೀ. ದೂರದಲ್ಲಿದೆ. ಬೆಂಗಳೂರು-ಮಂಗಳೂರು NH-47 ಸಾಗಿ ಬೆಳ್ಳೂರು ಕ್ರಾಸ್‌ಗೆ ತಲುಪಿದರೆ ಅಲ್ಲಿಂದ ಸುಮಾರು 8 ಕಿ.ಮೀ. ಅಂತರದಲ್ಲಿ ಆದಿಚುಂಚನಗಿರಿಯ ಬೆಟ್ಟ ಸಿಗುತ್ತದೆ. ಆದಿಚುಂಚನಗಿರಿ ಮಂಡ್ಯದಿಂದ 61 ಕಿ.ಮೀ. ದೂರದಲ್ಲಿದೆ. ಹಾಸನದಿಂದ ಇದು ಸುಮಾರು 81 ಕಿ.ಮೀ. ದೂರದಲ್ಲಿದ್ದರೆ, ಮೈಸೂರಿನಿಂದ ಸುಮಾರು 99 ಕಿ.ಮೀ. ದೂರದಲ್ಲಿದೆ. ಶ್ರೀ ಗಂಗಾಧರೇಶ್ವರನು ಇಲ್ಲಿನ ಆದಿದೇವತೆ. ಕಾಲಭೈರವೇಶ್ವರನು ಇಲ್ಲಿನ ಕ್ಷೇತ್ರಪಾಲಕನು. ಆದಿಚುಂಚನ ಮಠವು ಒಂದು ಬೆಟ್ಟದ ಮೇಲೆ ಇದ್ದು, ಬೆಟ್ಟದ ಶಿಖರವನ್ನು ಆಕಾಶಭೈರವ ಎಂದು ಕರೆಯಲಾಗುತ್ತದೆ. ಇಲ್ಲಿರುವ ಪವಿತ್ರ ಹೊಂಡವನ್ನು ಬಿಂದು ಸರೋವರ ಎಂದು ಕೂಡ ಕರೆಯಲಾಗುವುದು. ಈ ದೇವಸ್ಥಾನದಲ್ಲಿ ಕಾಲಭೈರವನ ವಾಹನವಾದ ಶ್ವಾನಗಳಿಗೆ ಪ್ರತಿದಿನ ಬೆಳಿಗ್ಗೆ ಹಾಗೂ ರಾತ್ರಿ ಎರಡು ಬಾರಿ ಪೂಜೆ ನಡೆಯುತ್ತದೆ. ಪುರಾಣದಲ್ಲಿ ಉಕ್ತವಾಗಿರುವಂತೆ ಶ್ರೀ ಆದಿಚುಂಚನಗಿರಿ ಪೀಠವು ಸ್ಥಾಪನೆಯಾಗಿದ್ದು, ತ್ರೇತಾಯುಗದಲ್ಲಿ ಎಂದು ಹೇಳಬಹುದು. ಈ ಕ್ಷೇತ್ರದಲ್ಲಿ ಸತತ ಅನ್ನದಾಸೋಹ ಕೂಡ ನಡೆಯುತ್ತಿದ್ದು, ಜಗದ್ಗುರು ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಈ ಕ್ಷೇತ್ರಕ್ಕೆ ಸಿದ್ಧಸಿಂಹಾಸನರಾಗಿದ್ದರು. ಅಂದಿನಿಂದಲೇ ಈ ಕ್ಷೇತ್ರಕ್ಕೆ ಸುವರ್ಣ ಯುಗ ಪ್ರಾರಂಭವಾಗಿದ್ದು ಈ ಕ್ಷೇತ್ರದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳೆಂದರೆ ಕಂಬದಮ್ಮ, ಶ್ರೀ ಜ್ವಾಲಪೀಠ, ಪಂಚಲಿಂಗಗಳು, ಕೆತ್ತನೆಸೋಮೇಶ್ವರ ಸ್ವಾಮಿ, ಗವಿಸಿದ್ದೇಶ್ವರ, ಮಲ್ಲೇಶ್ವರಸ್ವಾಮಿ ಚಂದ್ರಮೌಳೇಶ್ವರ ದೇವಾಲಯ ಹಾಗೂ ಕೂಗು ಬಂಡೆಯನ್ನು ಕಾಣಬಹುದು.

**ಬಾಲಗಂಗಾಧರನಾಥ ಸ್ವಾಮಿಯ ವಿವರಣೆ:**

ಅನಾರೋಗ್ಯದಿಂದ ಬಳಲುತ್ತಿದ್ದ ಶ್ರೀ ಶ್ರೀ ರಾಮಾನಂದನಾಥಸ್ವಾಮಿಯು ಶಿವೈಕ್ಯರಾದರು. ಇವರ ಇಚ್ಛೆಯಂತೆ ಶ್ರೀಮಠದ ಜವಾಬ್ದಾರಿಯನ್ನು ನಿರ್ವಹಿಸಬಲ್ಲ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳು ಮಠದ ಉತ್ತರಾಧಿಕಾರಿಗಳಾದರು. ದಿನಾಂಕ: 24-09-1974 ಶುಭದಿನದಂದು ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳ ಪಟ್ಟಾಭಿಷೇಕ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಶ್ರೀಗಳು 71ನೇ ಪೀಠಾಧಿಪತಿಗಳಾದರು. ನಂತರ ಶ್ರೀಗಳು, ನಾಥಪರಂಪರೆಯ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ಗಳನ್ನು ಸ್ಥಾಪಿಸಿದರು. ಇಂದು ಅದು ಮಹಾವೃಕ್ಷವಾಗಿ ಬೆಳೆದಿದೆ. ಪೂಜ್ಯರು ಕೇವಲ ಮೂರುವರೆ ದಶಕಗಳಲ್ಲಿ ನಾಡಿನಾದ್ಯಂತ ತೆರೆದಿರುವ 450 ಕ್ಕೂ ಹೆಚ್ಚು ಶಾಲಾಕಾಲೇಜುಗಳನ್ನು ಒಳಗೊಂಡ ಈ ಮಹಾವೃಕ್ಷದ ನೆರಳಿನಲ್ಲಿ ಆಶ್ರಯ ಪಡೆದ ವಿದ್ಯಾರ್ಥಿಗಳು ತಮ್ಮ ಬಾಳಿನಲ್ಲಿ ಬೆಳಕನ್ನು ಕಂಡಿದ್ದಾರೆ. 150 ಕ್ಕೂ ಹೆಚ್ಚು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು, 60ಕ್ಕೂ ಹೆಚ್ಚು ಪ್ರೌಢಶಾಲೆಗಳು, 50ಕ್ಕೂ ಹೆಚ್ಚು ಪದವಿಪೂರ್ವ ಕಾಲೇಜುಗಳನ್ನು, 8 ಪದವಿ ಕಾಲೇಜು, 8 ನರ್ಸಿಂಗ್ ಕಾಲೇಜ್ 2 ವೈದ್ಯಕೀಯ ಕಾಲೇಜು, 4 ಇಂಜಿನಿಯರಿಂಗ್ ಕಾಲೇಜುಗಳನ್ನು 50ಕ್ಕೂ ಹೆಚ್ಚು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದಾರೆ. ಇವರು ಈ ಕ್ಷೇತ್ರವನ್ನು ಬಹುಪರಿಶ್ರಮದಿಂದ ಭವ್ಯವಾಗಿ ನಿರ್ಮಿಸಿದ್ದಾರೆ. ದ್ರಾವಿಡ ಶೈಲಿಯ ವಾಸ್ತುವಿನ್ಯಾಸವಿರುವ ದೇವಾಲಯದ ವಿಮಾನಗೋಪುರಗಳು ಜೋಡರ ಶೈಲಿಯಲ್ಲಿವೆ. ಇದು ಕಳೆದ ಶತಮಾನದ ಅದ್ಭುತ ವಾಸ್ತು ನಿರ್ಮಾಣವೆಂದೆ ಇತಿಹಾಸಕಾರರ ಅಭಿಪ್ರಾಯವಾಗಿದೆ. ಇವರ ಈ ಸಾಧನೆಗೆ ಭಾರತ ಸರ್ಕಾರ ಪದ್ಮಭೂಷಣ ಗೌರವ ನೀಡಿ ಗೌರವಿಸಿದೆ. ಧಾರ್ಮಿಕ ಕೇಂದ್ರವಾಗಿದ್ದ ಆದಿಚುಂಚನಗಿರಿಮಠ ಇಂದು ಜಗತ್ತೇ ನಿಬ್ಬೆರೆಗಾಗುವಂತೆ ಬದಲಾಗಿದೆ. ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿ ಮಾರ್ಪಾಟಾಗಿದೆ. ಶ್ರೀಗಳ ಮರಣದ ನಂತರ ಶ್ರೀಗಳ ಶಿಷ್ಯನಾದ ಶ್ರೀ ಶ್ರೀ ನಿರ್ಮಲಾನಂದಸ್ವಾಮಿಗಳು 72ನೇ ಪೀಠಾಧೀಶರಾಗಿ ಮಠವನ್ನು ಮುನ್ನಡೆಸುತ್ತಿದ್ದಾರೆ.

ಕುಂಚ ಹಾಗೂ ಚುಂಚರೆಂಬ ಇಬ್ಬರು ರಾಕ್ಷಸರು ಸಂಹಾರವನ್ನು ಮಾಡಲು ಪರಶಿವನು ಕಾಲಭೈರವನನ್ನು ಆಹ್ವಾನಿಸುತ್ತಾನೆ. ಆ ಹೋರಾಟದಲ್ಲಿ ಕಾಲಭೈರವನು ಚುಂಚನ ತಮ್ಮನಾದ ಕಂಚನನ್ನು ಸಂಹಾರ ಮಾಡುತ್ತಾನೆ. ಆ ಸಂದರ್ಭದಲ್ಲಿ ಸಿಟ್ಟಿಗೆದ್ದ ಚುಂಚನು ತನ್ನ ಕೊಂಬಿನಿಂದ ನಿನ್ನನ್ನು ಸಂಹಾರ ಮಾಡುವೆ ಎಂದು ಮುಂದಾದಾಗ ಭೈರವನು ಚುಂಚನ ಕೊಂಬನ್ನು ಮುರಿಯುತ್ತಾನೆ. ಅಂದಿನಿಂದ ಪರಿವರ್ತನೆಯನ್ನು ಕಂಡ ಚುಂಚನ್ನು ಶರಣಾಗುತ್ತಾನೆ. ಕೈಲಾಸದಲ್ಲಿ ಯಾರು ಶ್ರೇಷ್ಠರು ಎಂಬ ಪ್ರಶ್ನೆಗೆ ಬ್ರಹ್ಮನು ಐದು ಮುಖವಿರುವ ನಾನೇ ಶ್ರೇಷ್ಠನು ಎಂಬ ಮಾತಿಗೆ ಶಿವನು ಕೋಪಗೊಂಡು ಶಿವನು ತನ್ನ ಕ್ರೋಧ ನೇತ್ರದಿಂದ ಕಾಲಭೈರವನನ್ನು ಆಹ್ವಾನಿಸುತ್ತಾನೆ. ಶಿವನು ನಾನೇ ಶ್ರೇಷ್ಠನು ಎಂದು ಬೀಗುತ್ತಿರುವ ಬ್ರಹ್ಮನ ತಲೆಯನ್ನು ಚ್ಛೇದಿಸು ಎಂಬ ಮಾತಿಗೆ ಭೈರವ ತನ್ನ ಎಡಗೈಯಿನ ಕಿರುಬೆರಳಿನಿಂದ ಕತ್ತರಿಸುತ್ತಾನೆ. ಅಂದಿನಿಂದ ಬ್ರಹ್ಮಹತ್ಯೆಯ ಕಾರಣ ಬ್ರಹ್ಮನ ತಲೆಯು ಭೈರವನ ಕೈಯಲ್ಲಿ ಉಳಿಯಿತು. ಭೈರವನ ಕೈಯಲ್ಲಿ ತಲೆಯನ್ನು ಕಂಡ ಚುಂಚನು ನಾಯಿಯ ರೂಪವನ್ನು ತಳೆದು ಬ್ರಹ್ಮನ ರುಂಡವನ್ನು ನೆಕ್ಕಲು ಹೋಗುತ್ತದೆ ಹಾಗೂ ಬ್ರಹ್ಮನು ತನ್ನ ರುಂಡಮೈಲಿಗೆಯಾಗುವುದು ಎಂದು ತಿಳಿದು ತನ್ನ ತಲೆಯನ್ನು ಬ್ರಹ್ಮನು ಹಿಂತೆಗೆದುಕೊಳ್ಳುತ್ತಾರೆ. ಇದನ್ನು ಕಂಡ ಭೈರವನು ಚುಂಚನಿಗೆ ಮೂರು ವರವನ್ನು ನೀಡುತ್ತಾನೆ, ಆಗ ಚುಂಚನು ಒಂದು ವರವಾಗಿ ನನ್ನ ಹೆಸರನ್ನು ಈ ಗಿರಿಗೆ ಇಡಬೇಕೆಂದು ಕೇಳುತ್ತಾನೆ ಹಾಗೂ ಎರಡನೆಯ ವರವಾಗಿ ನಾನು ಸದಾ ನಿನ್ನಲ್ಲೇ ನೆಲಸಿರಬೇಕು ಹಾಗೂ ಮೂರನೆ ವರವಾಗಿ ನಿನ್ನ ಸಂಚಾರದ ವೇಳೆಯಲ್ಲಿ ನನ್ನನ್ನು ನಿನ್ನ ವಾಹನವನ್ನಾಗಿ ಮಾಡಿಕೊಳ್ಳಬೇಕು ಎಂದಾಗ ಭೈರವನು ಎಲ್ಲಾ ವರವನ್ನು ನೆರವೇರಿಸಿದ ಫಲವಾಗಿ ಅಂದಿನಿಂದ ಭೈರವನು ಬಾಗಿಲು ಭೈರವನಾಗಿ ಕ್ಷೇತ್ರದ ರಕ್ಷಣೆಗೆ ಅಲ್ಲೇ ನೆಲೆಸುತ್ತಾರೆ. ಆದ್ದರಿಂದ ಆದಿಚುಂಚನಗಿರಿ ಎಂಬ ಹೆಸರು.